ದಿನಾಂಕಃ 19.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

4. ಫೆಬ್ರವರಿ 21 ನೇ ತಾರೀಕಿನಂದು ನಾನು ಪೊಲೀಸರಿಗೆ ದೂರನ್ನು ಕೊಟ್ಟಿದ್ದೆನು. ದೂರು ಕೊಟ್ಟ 3 ರಿಂದ 4 ದಿನಗಳ ಬಳಿಕ ಪೊಲೀಸರು ಮಹಜರ್ ಮಾಡಲು ಶಿವಮೂರ್ತಿ ಭಟ್ಟರು ಮತ್ತು ಆರೋಪಿಯ ಮನೆಯ ಬಳಿ ಮಹಜರ್ ಮಾಡಲು ಬಂದಿದ್ದರು.ಆ ಸಮಯದಲ್ಲಿ ನಾನು, ಚಾಸಾ.14 ಸಂಧ್ಯಾ ಮತ್ತು ಚಾಸಾ.15 ಮೀನಾರವರು ಅಲ್ಲಿ ಹಾಜರಿದ್ದೆವು. ಗಲಾಟೆಯಾದ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದೆನು. ಅಲ್ಲಿ ಪೊಲೀಸರು ಸಂಜೆ 5 ಗಂಟೆಯಿಂದ 6 ಗಂಟೆಯವರೆಗೆ ಮಹಜರ್ ಬರೆದುಕೊಂಡರು, ಅದಕ್ಕೆ ನಾನು, ಚಾಸಾ.14 ಮತ್ತು 15 ರವರು ಸಹಿ ಮಾಡಿದೆವು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

5. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ, ಸದರಿ ಫೋಟೋಗಳನ್ನು ಪೊಲೀಸರು ಮೇಲೆ ಹೇಳಿದಂತೆ ಮಹಜರ್

ಜರುಗಿಸಿದ ಸಮಯದಲ್ಲಿ ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಚಾಸಾ.14, 15 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ.

6. ಆದಾದ 4 ರಿಂದ 5 ದಿನಗಳ ಬಳಿಕ ಪೊಲೀಸರು ನನ್ನನ್ನು ಮತ್ತು ಚಾಸಾ.9 ಕಾವ್ಯಶ್ರೀರವರನ್ನು ಕೊಪ್ಪ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದರು. ಆಗ ನಾನು ಮತ್ತು ನನ್ನ ಮಗಳು ನ್ಯಾಯಾಧೀಶರಿಗೆ ನಡೆದ ವಿಚಾರಗಳನ್ನು ತಿಳಿಸಿ ಹೇಳಿಕೆ ಕೊಟ್ಟೆವು.

7. ಆದಾದ ಒಂದು ವಾರದ ಬಳಿಕ ಕೊಪ್ಪ ಡಿ.ವೈ.ಎಸ್.ಪಿ. ರವರ ಕಛೇರಿಗೆ ಹೋಗಿ ಗಲಾಟೆಯ ಬಗ್ಗೆ ತಿಳಿಸಿ ಹೇಳಿಕೆ ಕೊಟ್ಟೆನು. ನಾನು ಮತ್ತು ನಮ್ಮ ಅಕ್ಕಪಕ್ಕದ ಮನೆಯವರು ಆರೋಪಿ ನಮ್ಮ ಮಕ್ಕಳಿಗೆ ಚುಡಾಯಿಸುತ್ತಿದ್ದ ಬಗ್ಗೆ ಪ್ರಶ್ನಿಸಲು ಆತನ ಮನೆ ಬಳಿ ಹೋದಾಗ ಆರೋಪಿ ಕತ್ತಿಯನ್ನು ಹಿಡಿದುಕೊಂಡು ಬಂದು ನಮಗೆ ಬೆದರಿಸಿದ್ದನು. ಸದರಿ ಕತ್ತಿಯನ್ನು ಆರೋಪಿ ಕೃಷ್ಣಮೂರ್ತಿ ಭಟ್ಟರಿಗೆ ಸೇರಿದ ಶೆಡ್‌ನಲ್ಲಿ ಬಿಸಾಡಿ ಹೋಗಿದ್ದನು. ಸದರಿ ವಿಚಾರವನ್ನು ನಾನು ಡಿ.ವೈ.ಎಸ್.ಪಿ. ರವರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದೆನು. ಸದರಿ ಕತ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮರದ ಹಿಡಿಯಿರುವ ಒಂದು ಕತ್ತಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

8. ಆರೋಪಿ ನಿಮಗೆ ಹೆದರಿಸಲು ಬಳಸಿದ್ದ ಮು.ಮಾ.1 ಕತ್ತಿಯನ್ನು ಸ್ಥಳದಲ್ಲಿಯೇ ಬಿಸಾಡಿ ಹೋಗಿದ್ದನು ಎಂದರೆ ಸರಿ. ನಂತರ ಚಾಸಾ.2 ಕೃಷ್ಣಮೂರ್ತಿರವರು ತೆಗೆದು ತಮ್ಮ ಮನೆಯ ಪಕ್ಕದಲ್ಲಿರುವ ಕಾರಿನ ಶೆಡ್ ನಲ್ಲಿಟ್ಟಿದ್ದು ಅದನ್ನು ಪೊಲೀಸರು ಮಹಜರ್ ಜರುಗಿಸುವ ಸಮಯದಲ್ಲಿ ಹಾಜರುಪಡಿಸಿದ್ದಾರೆ ಎಂದರೆ ಸರಿ. ಗಲಾಟೆಯಾದ 4 ತಿಂಗಳ ಬಳಿಕ ನೀವು ನ್ಯಾಯಾಧೀಶರಿಗೆ ಹೇಳಿಕೆ ನೀಡಿದ್ದೀರಿ ಎಂದರೆ ಸರಿ.

<u>ಪಾಟೀ ಸವಾಲುಃ</u>

(ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ